ಶ್ರೀ ಎಂ. ಎಸ್. ಪಾಟೀಲ್.—ಇಡಿ ತಾಲ್ಲೂಕ್ಕಿನಲ್ಲಿರತಕ್ಕಂಥ ಸರ್ಕಾರಿ ಇಲಾಖೆಗಳು ಇಲಾಖಾವಾರು ಮಾಡತಕ್ಕಂಥ ಖರ್ಚು ಎಷ್ಟು ಎನ್ನುವುದರ ಬಗ್ಗೆ ವಿವರಗಳನ್ನು ಕೊಡುತ್ತೀರಾ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲಾಖಾವಾರು ವಿವರಗಳಿಲ್ಲ. ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ನಾನು ಕೇಳಿರತಕ್ಕಂಥ ಪ್ರಶ್ನೆ ಅದೇರೀತಿಯದಾಗಿರುತ್ತದೆ. ಎರಡುಕೋಟಿ ರೂಪಾಯಿಗಳು ಖರ್ಚಾಗಿರುತ್ತದೆಂದು ಹೇಳಿರುತ್ತೀರಿ, ಯಾವ ಮಾರ್ಗದಲ್ಲಿ ಖರ್ಚು ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರಿ ಅಧಿಕಾರಿಗಳಿಗೆ ಸಂಬಳವನ್ನು ಕೊಡುತ್ತಿರತಕ್ಕಂಥದ್ದು ಇರುತ್ತದೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಯಾವುದಾದರೂ ದೂರು ಇದ್ದರೆ ಅದನ್ನು ಹೇಳಬೇಕು.

ಶ್ರೀ ಎಂ. ಎಸ್. ಪಾಟೀಲ್.—ದೂರು ಬರದೇ ಇದ್ದರೂ ಕೂಡ ಇಲಾಖಾವಾರು ಖರ್ಚು ಏನು ಮಾಡುತ್ತಿರುತ್ತಾರೆ, ಆ ಖರ್ಚಿಗೆ ತಕ್ಕಂತೆ ಸರ್ಕಾರಿ ಅಧಿಕಾರಿಗಳು ಕೆಲಸ ಮಾಡುತ್ತಿರುತ್ತಾ ಎನ್ನುವ ಬಗ್ಗೆ ವಿವರಗಳು ಇದ್ದರೆ ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸದಸ್ಯರು ಸಂಬಳದ ಮಿತಿಗೆ ಅನುಸರಿಸಿ ಕೇಳಿರತಕ್ಕಂಥ ಪ್ರಶ್ನೆಯಾಗಿದೆ. ಆ ಬಗ್ಗೆ ಉತ್ತರವನ್ನು ಕೊಟ್ಟಿರುತ್ತೇನೆ. ಇಲಾಖೆಗಳು ಸರಿಯಾಗಿ ಕೆಲಸ ಮಾಡುತ್ತಿವೆಯೋ ಇಲ್ಲವೊ ಎನ್ನುವ ಬಗ್ಗೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸುತ್ತೇನೆ.

ಅಧ್ಯಕ್ಷರು,—ಇಂಥ ಕಡೆ ಕೆಲಸಗಳು ನಡೆಯುತ್ತಿಲ್ಲವೆಂದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ನೇರವಾಗಿ ಮಂತ್ರಿಗಳಿಗೆ ಬರೆದು ಕಳುಹಿಸಿ.

ಶ್ರೀ ಎಂ. ಎಸ್. ಪಾಟೀಲ್.—ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನ್ನು ಸಪೂರ್ಣವಾಗಿ ತಾವು ಪುನರ್ ಪರಿಶೀಲನೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಕೇಳಿರುವ ಪ್ರಶ್ನೆ ಸಂಬಳಕ್ಕೆ ಸಂಬಂಧಪಟ್ಟಂತೆ ಇದೆ, ಯಾರಿಗಾದರೂ ಸಂಬಳ ಬರದಿದ್ದರೆ ಅದರ ಬಗ್ಗೆ ಕೇಳಬಹುದು.

ಶ್ರೀ ಎಂ. ಎಸ್. ಪಾಟೀಲ್.—ಅದು ಕೂಡ ತಕರಾರು ಇದೆ.

ಅಧ್ಯಕ್ಷರು,—ಪಿಡಬ್ಲ್ಯುಡಿ ಡಿಪಾರ್ಟ್‌ಮೆಂಟ್ ಬಗ್ಗೆ ಪ್ರಶ್ನೆ ಕೇಳುವುದಾದರೆ ಪಿಡಬ್ಲ್ಯುಡಿ ಮಿನಿಸ್ಟರ್ ಉತ್ತರ ಕೊಡುತ್ತಾರೆ. ಆದರೆ ತಾವು ಕೇಳಿರುವುದು ಸಂಬಳದ ಬಗ್ಗೆ ಯಾಗಿರುವುದರಿಂದ, ಸಂಬಳದ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ.

Completion of Kabini Canal

1039 SRI M. SIDDAMADAIAH (Kollegal)—Will the Minister of State for Major and Medium Irrigation be pleased to state ;

(a) the amount sanctioned by the Government for the work of Kabini Canal during the year 1978-79 1979-80 and 1980-81;

(b) (i) whether the Department has completed this work by spending the entire amount;

OR

(ii) whether the department has refunded the amount unspent;

(c) the action taken against such officers:

(d) when the water will be supplied to Kollegal and Yalandur taluks ?

SRI B. B. CHMMANAKATTI (Minister of State for Major and Medium Irrigation).—

(a)—

During the year 1978–79 Rs. 674.21 lakhs.
do 1979–80 Rs. 541.64 lakhs.
do 1980–81 Rs. 575.00 lakhs.

(b) (i) works have been completed by spending Rs. 674.74 lakhs during 1978–79. Rs. 593 31 lakhs during 1979–80; and Rs. 580.98 lakhs during 1980–81.

To.

(c) This question does not arise in view of replies furnished to clause (b) above.

(d) It is proposed to supply water to about 8000 acres of land in Yalandur taluk by June 1984, and to the remaining 8000 acres of land of Yalandur Taluk and to all the 28,700 acres ofland of Kollegal Taluk by June, of 1985.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ ತಮ್ಮ ಉತ್ತರದಲ್ಲಿ ಕಬಿನಿ ನಾಲೆ ಕೆಲಸಕ್ಕೆ ೧೯೭೮-೭೯ ನೇ ಸಾಲಿಗೆ ೬೭೪.೨೧ ಲಕ್ಷ ರೂಪಾಯಿಗಳು, ೧೯೭೯-೮೦ ನೇ ಸಾಲಿಗೆ ೫೪೧.೬೪ ಲಕ್ಷ ರೂಪಾಯಿಗಳು, ೧೯೮೦-೮೧ನೇ ಸಾಲಿಗೆ ೫೭೫.೦೦ ಲಕ್ಷ ರೂಪಾಯಿಗಳು ಮಂಜೂರು ಮಾಡಲಾಗಿದೆ ಎಂದು ಹೇಳಿರುತ್ತೀರಿ, ಆದರೆ ವರ್ಷ ವರ್ಷ ಈ ರೀತಿ ಕಡಿಮೆ ಹಣವನ್ನು ಕೊಟ್ಟಿರುವುದಕ್ಕೆ ಕಾರಣವೇನು ಎಂದು ಕೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೧೯೭೯-೮೦ ನೇ ಸಾಲಿಗೆ ೬೭೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಕೊಡಬೇಕಾದಷ್ಟು ೭ ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೇವೆ. ಈ ವರ್ಷ ೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಪೆಟ್ಟಿಗೆ ಹಣವನ್ನು ವರ್ಷ ವರ್ಷ ಕೊಟ್ಟಿದ್ದೇವೆಯೇ ಹೊರತು ಕಡಿಮೆ ಮಾಡಿಲ್ಲ.

ಶ್ರೀ ಎಂ. ಸಿದ್ದಮಾದಯ್ಯ.—ತಾವು ಕೊಟ್ಟಿರುವ ಹಣ ಸರಿಯಾಗಿ ಖರ್ಚು ಮಾಡುತ್ತಿಲ್ಲ. ಲ್ಯಾಪ್ಸ್ ಆಗುತ್ತಿದೆ. ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ೬೦ ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿರುತ್ತಾರೆ. ಈ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಹಣವನ್ನು ಲ್ಯಾಪ್ಸ್ ಮಾಡಿಲ್ಲ. ಕೊಟ್ಟಿರತಕ್ಕಂಥ ಹಣವನ್ನು ಪೂರ್ತಿಯಾಗಿ ಖರ್ಚುಮಾಡಿರುತ್ತಾರೆ.

ಶ್ರೀ ಎಂ. ಸಿದ್ದಮಾದಯ್ಯ.—ಅವರು ಖರ್ಚುಮಾಡಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಅಧ್ಯಕ್ಷರು.—೫೦ ಲಕ್ಷ ರೂಪಾಯಿಗಳನ್ನು ಜಾಸ್ತಿ ಖರ್ಚುಮಾಡಿದ್ದಾರೆಯೇ ಹೊರತು ಕಡಿಮೆ ಮಾಡಿಲ್ಲ.

ಶ್ರೀ ಎಂ. ಸಿದ್ದಮಾದಯ್ಯ.—೧೯೮೪ ನೇ ಇಸವಿಗಾದರೂ ಈ ಕೆಲಸವನ್ನು ಪೂರೈಸುತ್ತೀರಾ ಎನ್ನುವ ಬಗ್ಗೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ ಕಬಿನಿ ರೈಟ್ ಬ್ಯಾಂಕ್ ಕ್ಯಾನಲ್‌ನ್ನು ೧೯೮೪-೮೫ ನೇ ಸಾಲಿಗೆ ಪೂರ್ತಿಯಾಗಿ ಕಾರ್ಯಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಬಹುಶಃ ಅದಕ್ಕಾಗಿ ಸುಮಾರು ೨೦-೩೦ ಕೋಟಿ ರೂಪಾಯಿಗಳು ಬೇಕಾಗಬಹುದೆಂಬ ಅಂದಾಜಿ ಕೂಡ ಇರುತ್ತದೆಂದು ತಿಳಿಸುತ್ತೇನೆ.

ಶ್ರೀ ಎಂ. ಸಿದ್ದಮಾದಯ್ಯ.—ಮುಂದಿನ ವರ್ಷ ಎಷ್ಟು ಹಣ ಕೊಡುತ್ತೀರಿ ? ೧೯೮೪ ನೇ ಇಸವಿಯ ಹೊತ್ತಿಗೆ ಎಷ್ಟು ಹಣ ಕೊಡುತ್ತೀರಿ ? ೩೪ ಕೋಟಿ ರೂಪಾಯಿಗಳಲ್ಲಿ ೮ ಕೋಟಿ ರೂಪಾಯಿಗಳಂತೆ ಕೊಡುತ್ತಾ ಹೋದರೆ ಎಷ್ಟು ವರ್ಷಗಳಾಗುತ್ತವೆ ಕೆಲಸವನ್ನು ಪೂರೈಸಲಿಕ್ಕೆ ? ೧೯೮೪ನೇ ಇಸವಿಯ ಹೊತ್ತಿಗೆ ನೀವು ಕೆಲಸವನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಎಷ್ಟೇ ಹಣ ಖರ್ಚಾದರೂ ಕೆಲಸವನ್ನು ೧೯೮೪-೮೫ ರಲ್ಲಿ ಪೂರ್ತಿಗೊಳಿಸುತ್ತೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಕಳೆದ ಸಲ ೧೯೮೩ ನೇ ಇಸವಿಗೆ ಕಬಿನಿ ನೀರನ್ನು ಕೊಳ್ಳೇಗಾಲ ತಾಲ್ಲೂಕಿಗೆ ಕೊಡುತ್ತೇವೆಂದು ಹೇಳಿದ್ದೀರಿ, ಈಗ ೧೯೮೪-೮೫ ಕ್ಕೆ ಕೊಡುತ್ತೇವೆ ಎಂದು ಹೇಳುತ್ತೀರಿ. ೧ ಲಕ್ಷದ ೮೫ ಸಾವಿರ ಎಕರೆ ನೀರಾವರಿ ಪ್ರದೇಶದಲ್ಲಿ ಈಗ ೧ ಲಕ್ಷದ ೫ ಸಾವಿರ ಎಕರೆ ಎಡ ನಾಲೆಯಲ್ಲೂ ೩ ಸಾವಿರ ಎಕರೆ ಬಲ ನಾಲೆಯಲ್ಲೂ ನೀರು ಒದಗಿಸಲಾಗಿದೆ. ಈಗ ಒಟ್ಟು ೧ ಲಕ್ಷದ ೨ ಸಾವಿರ ಎಕರೆ ಭೂಮಿಗೆ ನೀರು ಒದಗಿಸಲಾಗಿದ್ದು ಜೊತೆಗೆ ೩೦ ಸಾವಿರ ಎಕರೆ ಭೂಮಿಗೆ ನೀರು ಒದಗಿಸಲಾಗಿದೆ ಎಂದೂ ಮಂತ್ರಿಗಳು ಹೇಳಿದ್ದಾರೆ. ಉಳಿದಿರತಕ್ಕ ಭೂಮಿಗೆ ನೀರನ್ನು ಒದಗಿಸಲು ೧೯೮೪-೮೫ ರಲ್ಲಿ ಸಾಧ್ಯವಾಗುತ್ತದೆಯೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಂ. ಸಿದ್ದಮಾದಯ್ಯ.—೧೯೮೪ ರ ಜೂನ್‌ನಲ್ಲಿ ಪೂರೈಸುತ್ತೇವೆಂದು ತಮ್ಮ ಹೇಳಿಕೆಯಲ್ಲಿ ಹೇಳುತ್ತೀರಿ. ಈಗ ೧೯೮೫ ನೇ ಇಸವಿ ಎಂದು ಹೇಳುತ್ತೀರಿ ದಯಮಾಡಿ ನಿಚಿತವಾದ ಉತ್ತರವನ್ನು ತಿಳಿಸಬೇಕು. ನಮ್ಮಲ್ಲಿ ಕೆರೆಗಳು ಕಡಿಮೆ ಇದ್ದು ಅವುಗಳು ಸಹ ತುಂಬುವುದು ಬಹಳ ಕಷ್ಟ, ಆದುದರಿಂದ ಬೇಗ ನೀರು ಕೊಟ್ಟರೆ ನಮ್ಮ ತಾಲ್ಲೂಕಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—೧೯೮೪-೮೫ ರಲ್ಲಿ ಮಾಡಿಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೧೯೮೪-೮೫ ರಲ್ಲಿ ಕೆಲಸಗಳನ್ನು ಮುಂಗಿಸಿ ಬೇಗ ನೀರು ಕೊಡಲು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಎ. ಬಿ. ಪಾಟೀಲರು ಗೈರು ಹಾಜರಾಗಿರುತ್ತಾರೆ.

(ಪ್ರಶ್ನೆ ನಂ. ೨೯೯ (೯೨೬)

ಪ್ರಶ್ನೋತ್ತರ ವೇಳೆ ಮುಗಿಯಿತು.

Question for Answer on the day (but not taken up)

Sanction of Girls High School at Aland Taluk

926 SRI A.B. PATIL (Aland)—Will the Minister of State for Primary and Secondary Education be pleased to state.—

(a) whether it is a fact that there is no separate Girls High School in Aland Taluk, particularly in Aland;

(b) if so, the steps taken by the Government to sanction the Girls High School;

(c) If not the reasons therefore?